ಕಾರ್ಯಗತಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದುದರಿಂದ, ಈ ಬಗ್ಗೆ ಕಾನೂನು ಇಲಾಖೆ ಅಭಿಪ್ರಾಯವನ್ನು ಪಡೆಯಲಾಯಿತು. ಕಾನೂನು ಇಲಾಖೆಯು ಗುತ್ತಿಗೆದಾರರಿಗೆ ಯಾವ ಉದ್ದೇಶಕ್ಕಾಗಿ ನಿವೇಶನವನ್ನು ನೀಡಲಾಗಿತ್ತೋ, ಆ ಉದ್ದೇಶಕ್ಕಾಗಿ ಅವರು ಆ ನಿವೇಶನವನ್ನು ಬಳಸದೆ ಇರುವುದರಿಂದ ಅವರ ಕರಾರನ್ನು ರದ್ದುಪಡಿಸಿ ನಂತರ ಅವರ ಮೇಲೆ ಸೂಕ್ತ ಮೊಕದ್ದಮೆ ನಡೆಸಬೇಕೆಂಬ ಅಭಿಪ್ರಾಯವನ್ನು ನೀಡಿರುತ್ತದೆ. ಅದರಂತೆ ಈ ಬಗ್ಗೆ ಲೋಕೋಪಯೋಗಿ ಇಲಾಖೆಯು ಈಗಾಗಲೇ ಕ್ರಮ ಕೈಗೊಂಡು ಮುಖ್ಯ ಅಭಿಯಂತರರು, (ಸಂಪರ್ಕ ಮತ್ತು ಕಟ್ಟಡ), ಧಾರವಾಡ ಇವರಿಗೆ ಈ ಗುತ್ತಿಗೆದಾರರೊಂದಿಗೆ ಆಗಿರುವ ಕರಾರನ್ನು ರದ್ದುಪಡಿಸಿ ಸೂಕ್ತ ನ್ಯಾಯಸ್ಥಾನದಲ್ಲಿ ಅವರ ಮೇಲೆ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ.

6. ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮದ ಜನತೆಗೆ ವಿದ್ಯುತ್ ಅಭಾವ

ಶ್ರೀ ಜಿ.ಜಿ. ಯಲ್ಲಿಗುತ್ತಿ (ಬೀಳಗಿ):– ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮದ ಜನತೆಗೆ ವಿದ್ಯುತ್ ಅಭಾವದಿಂದ ತುಂಬಾ ತೊಂದರೆಯಾಗಿದ್ದು, ಈ ಭಾಗದ ರೈತರು ಮತ್ತು ಸಾರ್ವಜನಿಕರಿಗೆ ದಿನನಿತ್ಯದ ಕೆಲಸ ಕಾರ್ಯಗಳಿಗೆ ತುಂಬಾ ಅನಾನುಕೂಲವಾಗಿದೆ. ಆದ್ದರಿಂದ, ಮೇಲ್ಕಂಡ ಕುಂದರಗಿ ಗ್ರಾಮದಲ್ಲಿ ಪ್ರಸ್ತುತ ವರ್ಷ 1993–94ನೇ ಸಾಲಿನಲ್ಲಿ 33 (11) ಕೆ.ವಿ.ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿ, ಈ ಭಾಗದ ಜನತೆಗೆ ವಿದ್ಯುತ್ ಅಭಾವವನ್ನು ನಿವಾರಿಸಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ:– (ಹಣಕಾಸು ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ಉಪಮುಖ್ಯಮಂತ್ರಿಗಳ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

"ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮಕ್ಕೆ ಈಗ ಬೀಳಗಿಯಲ್ಲಿರುವ 33:11 ಕೆ.ವಿ. 2:5 ಎಂ.ವಿ.ಎ. ಸಾಮರ್ಥ್ಯದ ಉಪವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಈ ಬೀಳಗಿ ಉಪವಿದ್ಯುತ್ ಕೇಂದ್ರವು ಪೂರ್ಣವಾಗಿ ಲೋಡ್ ಆಗಿರುತ್ತದೆ ಮತ್ತು ಕುಂದರಗಿ ಗ್ರಾಮಕ್ಕೆ ಸರಬರಾಜಾಗುತ್ತಿರುವ ವಿದ್ಯುತ್ ವೋಲ್ಟೇಜ್ ಸ್ವಲ್ಪ ಕಡಿಮೆಯಾಗಿರುವುದು ಕ.ವಿ. ಮಂಡಳಿಯ ಗಮನಕ್ಕೆ ಬಂದಿದೆ. ಈ ತೊಂದರೆಯನ್ನು ನಿವಾರಿಸಲು ಕ.ವಿ. ಮಂಡಳಿಯು ಬೀಳಗಿಯ ಉಪವಿದ್ಯುತ್ ಕೇಂದ್ರವನ್ನು 110 ಕೆ.ವಿ. ಉಪಕೇಂದ್ರವನ್ನಾಗಿ ಪರಿವರ್ತಿಸಲು ಹಾಗೂ ಕುಂದರಗಿಯಲ್ಲಿ 33:11 ಕೆ.ವಿ. 1:5 ಎಂ.ವಿ.ಎ. ಸಾಮರ್ಥ್ಯದ ಉಪವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಮಂಜೂರಾತಿ ನೀಡಿರುತ್ತದೆ. ಆದರೆ ಬೀಳಗಿಯ 110 ಕೆ.ವಿ. ಉಪವಿದ್ಯುತ್ ಕೇಂದ್ರದ ಕೆಲಸವನ್ನು ಮೊದಲು ಪ್ರಾರಂಭಿಸಿ, ನಂತರ ಕುಂದರಗಿ ಉಪವಿದ್ಯುತ್ ಕೇಂದ್ರದ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. ಈ ಕೆಲಸಗಳನ್ನು 1993–94ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ."

7 ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕ ಕಾರಣ ಪ್ರವಾಸಿಗಳಿಗೆ ವ್ಯವಸ್ಥೆ

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಸನ್ಮಾನ್ಯ ಅಧ್ಯಕ್ಷರೇ, 1993ನೇ ವರ್ಷದ ಕೊನೆಯಲ್ಲಿ ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ನಡೆಯಲಿದೆ. ಈ ಕಾರಣ ಪ್ರವಾಸಿಗಳ ಅನುಕೂಲತೆಗಾಗಿ ಹಲವಾರು ಅಭಿವೃದ್ಧಿಗಳನ್ನು ಶ್ರೀ ಕ್ಷೇತ್ರದಲ್ಲಿ ಸರಕಾರದವರು ಹಮ್ಮಿಕೊಂಡಿರುತ್ತಾರೆ. ಇವುಗಳಲ್ಲಿ ಬಹಳ ಪ್ರಾಮುಖ್ಯವಾದ ಅಭಿವೃದ್ಧಿ ಕಾರ್ಯಕ್ರಮಗಳು ಎಂದರೆ ವಿವಿಧ ಕಡೆಗಳಿಂದ ಬರುವ ಪ್ರವಾಸಿಗಳು ಸುಖಕರವಾಗಿ, ಸುಗಮವಾಗಿ, ಸರಿಯಾಗಿ ಕ್ಷೇತ್ರಕ್ಕೆ ಬರಬೇಕು ಎಂಬುದು. ಆ ದೃಷ್ಟಿಯಿಂದ ನಾನು ಕೃಷ್ಣರಾಜಪೇಟೆಯಿಂದ ಕುಂದೂರು ಧಮಲಂಗಲ ಮಾರ್ಗವಾಗಿ ಶ್ರವಣಬೆಳಗೊಳಕ್ಕೆ ಹೋಗುವ ನೇರ ರಸ್ತೆಯನ್ನು ಡಾಂಬರೀಕರಣ ಮಾಡಬೇಕೆಂದು